ಶ್ರೀ ಹೆಚ್.ಡಿ. ದೇವೇಗೌಡ.-ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಎರಡೂ ಕೆಲಸಗಳು ಕಷ್ಟ ಸಾಧ್ಯ. ಈಗಿರತಕ್ಕಂಥ ಸುರಂಗ ಸೇತುವೆಯನ್ನು ಎತ್ತರಿಸುವುದಕ್ಕೂ ಆಗುವುದಿಲ್ಲ, ಇಲ್ಲ ಕಡಿಮೆ ಮಾಡಿ ತಗ್ಗಿಸುವುದಕ್ಕೂ ಆಗುವುದಿಲ್ಲ. ಕಾರಣವೇನೆಂದರೆ ಆ ಸೇತುವೆಯ ಪಕ್ಕದಲ್ಲಿಯೇ ಒಂದು ನದಿ ಇದೆ. ಅಲ್ಲಿ ನೀರಿನ ಪ್ರಮಾಣ ಜಾಸ್ತಿಯಾದರೆ ಫ್ಲಡ್ಸ್ ಬರುತ್ತದೆ. ಇಂತಹ ಸಂದರ್ಭದಲ್ಲಿ ನಾವು ಇನ್ನು ತಗ್ಗು ಮಾಡಿದರೆ ಅಲ್ಲಿ ನೀರು ತುಂಬಿಕೊಂಡು ಇನ್ನೂ ಅವ್ಯವಸ್ಥೆಯಾಗುತ್ತದೆ. ಈ ಒಂದು ಸನ್ನಿವೇಶದಲ್ಲಿ ರೈಲ್ವೆ ಇಲಾಖೆಯವರು ಕೂಡ ಒಪ್ಪಿಕೊಳ್ಳುವುದಿಲ್ಲ. ಈಗಿರುವಂತಹ ರೀತಿಯಲ್ಲಿಯೇ ಸಂಚಾರಕ್ಕೆ ಯೋಗ್ಯವಾಗಿ ಮಾಡಲಾಗುತ್ತದೆ.

ಶ್ರೀ ಬಿ. ಎ. ಜೀವಿಜಯ ಮಾನ್ಯ ಅರಣ್ಯ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಸಂಬರು ೩೮೫ (೯೧೯) ನೇರವಾಗಿ ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು. ಆದರೂಕೂಡ ನಾನು ಈ ಪ್ರಶ್ನೆಗೆ ಉತ್ತರ ಹೇಳುವುದಾದರೆ ಸದ್ಯದ ಪರಿಸ್ಥಿತಿಯಲ್ಲಿ ಅಂತಹ ಯಾವುದೇ ಯೋಚನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

MR. SPEAKER.—Question carried over.

ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕು ಹತ್ತರಗಿ ಬಳಿ ಇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರ ಮೇಲಿರುವ ಸೇತುವೆಯಲ್ಲಿ ವಸೂಲಿ ಮಾಡಲಾಗುತ್ತಿರುವ ವಾಹನ ತೆರಿಗೆ ಕುರಿತು

೯೨೭. (ಬಿ) ಶ್ರೀ ಕಲ್ಲಪ್ಪ ಬಿ ಮಾಗೆಣ್ಣವರ್ ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ದಯವಿಟ್ಟು ಉತ್ತರಿಸುವರೆ?

(ಅ) ಹುಕ್ಕೇರಿ ತಾಲ್ಲೂಕು ಹತ್ತರಗಿಯ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ರಲ್ಲಿರುವ ಸೇತುವೆಯ ಮೇಲೆ ಓಡಾಡುವ ವಿವಿಧ ರೀತಿಯ ವಾಹನಗಳಿಂದ ವಸೂಲಿ ಮಾಡಲಾಗುತ್ತಿರುವ ತೆರಿಗೆಯು ಯಾವ ರೀತಿಯದು?

(ಆ) ಇದುವರೆಗೆ ವಸೂಲಿ ಮಾಡಲಾಗಿರುವ ಮೊತ್ತ ಮತ್ತು ಆ ಹಣವನ್ನು ಎಲ್ಲಿ ಇರಿಸಾಲು ಮಾಡಲಾಗಿದೆ?

(ಇ) ಈ ಸೇತುವೆಯ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು?

(ಈ) ಎಲ್ಲಿಯವರೆಗೆ ವಾಹನ ತೆರಿಗೆಯ ವಸೂಲಿ ಮುಂದುವರಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ್ರ(ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) ಉತ್ತರಿಸುವರು.

(ಅ) ಈ ಸೇತುವೆಯಲ್ಲಿ ವಸೂಲಿ ಮಾಡಲಾಗುತ್ತಿರುವ ತೆರಿಗೆ ರಾಷ್ಟ್ರೀಯ ಹೆದ್ದಾರಿಗಳ ಶಾಶ್ವತ ಸೇತುವೆಗಳ ಉಪಯೋಗ ಶುಲ್ಕ.

(ಆ) ದಿನಾಂಕ ೨೬-೭-೧೯೮೫ರವರೆಗೆ ವಸೂಲಿ ಮಾಡಲಾದ ಹಣ ೧,೯೭,೦೪,೩೧೫-೦೦ ರೂಗಳು. ಪ್ರತಿ ವಾರದಲ್ಲಿ ವಸೂಲಿ ಮಾಡಲಾದ ಹಣವನ್ನು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ವೇತನ ಮತ್ತು ಲೆಕ್ಕಾಧಿಕಾರಿ (ರಾಷ್ಟ್ರೀಯ ಹೆದ್ದಾರಿಗಳು) (Pay and Accounts Officer (National Highways) ಸಾರಿಗೆ ಹಾಗೂ ನೌಕಾಯನ ಸಚಿವಾಲಯ (ರಸ್ತೆ ಶಾಖೆ) ನವದೆಹಲಿ ಇವರಿಗೆ ಇರಿಸಾಲು ಮಾಡಲಾಗುತ್ತಿದೆ.

(ಇ) ಈ ಸೇತುವೆಯ ನಿರ್ಮಾಣಕ್ಕೆ ತಗಲಿರುವ ವೆಚ್ಚ ೧,೩೨,೧೦, ೮೦೩-೦೦ ರೂ.ಗಳು ಸೇತುವೆ ಮತ್ತು ಅದರ ಕೂಡು ಹಾದಿಯ ನಿರ್ಮಾಣ ವೆಚ್ಚ ಸೇರಿ).

(ಈ) ಸುಮಾರು ೧೯೮೯ನೇ ಇಸವಿ ಆಕ್ಟೋಬರ್ ಮಾಹೆಯ ಕೊನೆಯವರೆಗೆ.